**ದಿನಾಂಕಃ02.02.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ** ಪ್ರತಿವಾದಿಯರ ಪರ ಶ್ರೀ ಸಿ ಎಂ ಜಿ ವಕೀಲರಿಂದಃ-

ನನಗೆ ಕನ್ನಡ ಮತ್ತು ಆಂಗ್ಲ ಭಾಷೆ ಓದಲು ಬರೆಯಲು ಬರುತ್ತದೆ. ಈ ದಾವೆಯನ್ನು ಪ್ರತಿವಾದಿಯ ಮೇಲೆ ದಾಖಲಾತಿಗಳನ್ನು ಸುಳ್ಳು ಸೃಷ್ಟಿಸಿಕೊಂಡು ಆತನ ಹೆಸರಿಗೆ ದಾವಾ ಸ್ವತ್ತನ್ನು ಮಾಡಿಕೊಂಡ ಕಾರಣಕ್ಕಾಗಿ ಹಾಕಿರುತ್ತೇನೆ. ಹಾಗಾಗಿ ನನ್ನ ಜಮೀನು ನನಗೆ ಬೇಕು ಎಂದು ದಾವೆ ಹೂಡಿರುತ್ತೇನೆ. ಹಿರಿಯಂಗಳ ಗ್ರಾಮದ ಸರ್ವೆ ನಂ.119 ರ 4 ಎಕರೆ 12 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ಈ ದಾವೆ ಹಾಕಿರುತ್ತೇನೆ. ದಾವಾ ಆಸ್ತಿಯನ್ನು 1954 ರಲ್ಲಿ ನನ್ನ ಅಜ್ಜ ಹುಚ್ಚಪ್ಪ ಯಾನೆ ಹುಚ್ಚಯ್ಯ ಮತ್ತು ನನ್ನ ಅಜ್ಜಿ ಗಂಗಮ್ಮ ರವರು ಸೇರಿ ಖರೀದಿ ಮಾಡಿರುತ್ತಾರೆ. ಯಾರಿಂದ ಖರೀದಿಸಿದ್ದರು ಎಂದು ನನಗೆ ಗೊತ್ತಿಲ್ಲ. ಖರೀದಿ ಮಾಡಿದ ಸಂಬಂಧ ದಾಖಲೆಗಳನ್ನು ನಾನು ನನ್ನ ವಕೀಲರಿಗೆ ನೀಡಿರುತ್ತೇನೆ. ನನ್ನ ಅಜ್ಜ-ಅಜ್ಜಿ ಖರೀದಿಸಿದ ಕ್ರಯಪತ್ರದ ನಕಲನ್ನು ನ್ಯಾಯಾಲಯಕ್ಕೆ ವಕೀಲರ ಮೂಲಕ ಸಲ್ಲಿಸಿರುತ್ತೇನೆ. ನನ್ನ ಅಜ್ಜ-ಅಜ್ಜಿ 1954 ರಲ್ಲಿ ಖರೀದಿ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ.

ನನ್ನ ಅಜ್ಜ ಹುಚ್ಚಯ್ಯ ಬಿನ್ ನಂಜಯ್ಯ ರವರಿಗೆ ದಾವಾ ಆಸ್ತಿಯು ದರಖಾಸ್ತು ಮುಖಾಂತರವಾಗಿ ಬಂದಿರುತ್ತದೆ ಎಂದರೆ ಇರಬಹುದು.

ಸಾಕ್ಷಿಗೆ ಈಗ ದೃಢೀಕೃತ ಆರ್ ಆರ್ ದಾಖಲೆಯನ್ನು ತೋರಿಸಿ ಅದರಲ್ಲಿ ಹುಚ್ಚಯ್ಯ ಬಿನ್ ನಂಜಯ್ಯ ರವರಿಗೆ ಹಿರಿಯಗಂಳ ಗ್ರಾಮದ ಸರ್ವೆ ನಂ.119 ರ ಜಮೀನು ದರಖಾಸ್ತು ಮೂಲಕ ಬಂದಿದೆ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ಸಾಕ್ಷಿಯು ಸದರಿ ದಾಖಲೆಯನ್ನು ಒಪ್ಪಿದ್ದರಿಂದ ಅದನ್ನು ನಿಡಿ 1 ಎಂದು ಗುರುತಿಸಲಾಯಿತು.

ಹಿರಿಯಂಗಳ ಗ್ರಾಮದ ಸರ್ವೆ ನಂ.114 ರ ಜಮೀನು ನನ್ನ ಅಜ್ಜನಿಗೆ ಸೇರಿದ ಜಮೀನು ಎಂದರೆ ಸರಿ. ಸಾಕ್ಷಿಗೆ ಈಗ ಇನ್ನೊಂದು ದೃಢೀಕೃತ ಆರ್ ಆರ್ ದಾಖಲೆಯನ್ನು ತೋರಿಸಿ ಅದರಲ್ಲಿ ಹುಚ್ಚಯ್ಯ ಬಿನ್ ನಂಜಯ್ಯ ರವರಿಗೆ ಹಿರಿಯಗಂಳ ಗ್ರಾಮದ ಸರ್ವೆ ನಂ.114 ರ 5 ಎಕರೆ 19 ಗುಂಟೆ ಜಮೀನು ಇದೆ ಎಂದರೆ ಸರಿ. ಸಾಕ್ಷಿಯು ಸದರಿ ದಾಖಲೆಯನ್ನು ಒಪ್ಪಿದ್ದರಿಂದ ಅದನ್ನು ನಿಡಿ 2 ಎಂದು ಗುರುತಿಸಲಾಯಿತು. ಸದರಿ ನಿಡಿ 2 ರ ಜಮೀನು ಸಹಃ ದರಖಾಸ್ತುವಿನ ಮೂಲಕ ಬಂದ ಜಮೀನು ಎಂದರೆ ಸರಿ.

ಹಿರಿಯಗಂಳ ಗ್ರಾಮದ ಸರ್ವೆ ನಂ.119 ರಲ್ಲಿ 4 ಎಕರೆ 12 ಗುಂಟೆ ಮತ್ತು 114 ರಲ್ಲಿ 5 ಎಕರೆ 19 ಗುಂಟೆ ಈ ಎರಡೂ ಜಮೀನುಗಳು ನನ್ನ ಅಜ್ಜನಿಗೆ 25.06.1928 ರಲ್ಲಿ ಸಾಗುವಳಿ ಚೀಟಿ ಮುಖಾಂತರ ಬಂದಿರುತ್ತದೆ ಎಂದರೆ ಸರಿ. 1954 ರಲ್ಲಿ ನನ್ನ ಅಜ್ಜ-ಅಜ್ಜಿ ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಅಜ್ಜಿ ಗಂಗಮ್ಮ, ನನ್ನ ದೊಡ್ಡಪ್ಪ ತಿಮ್ಮಯ್ಯ ಮತ್ತು ನನ್ನ ತಂದೆ ಬಿ ಹೆಚ್ ನಂಜುಂಡಪ್ಪ ರವರ ಸೇರಿಕೊಂಡು ದಿಃ26.05.1949 ರಲ್ಲಿ ಬೆಳಶೆಟ್ರು ಮರುಳಪ್ಪ ರವರ ಮಕ್ಕಳು ರುದ್ರಪ್ಪ ರವರಿಗೆ ಶುದ್ಧ ಕ್ರಯಪತ್ರದ ಮೂಲಕ ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಹಳ್ಳಿಕಾರ್ ಮತ ಎಂದರೆ ನಮ್ಮದೇ ಮತ. ಹಳ್ಳಿಕಾರ್ ಹುಚ್ಚಯ್ಯ ಎಂದರೆ ನನ್ನ ಅಜ್ಜ. ಹಳ್ಳಿಕಾರ್ ಹುಚ್ಚಯ್ಯ ರವರ ಹೆಂಡತಿ ಎಂದರೆ ನನ್ನ ಅಜ್ಜಿ. ಹಳ್ಳಿಕಾರ್ ಹುಚ್ಚಯ್ಯ ರವರ 1 ನೇ ಮತ್ತು 2 ನೇ ಮಗ ಎಂದರೆ ನನ್ನ ದೊಡ್ಡಪ್ಪ ತಿಮ್ಮಯ್ಯ ಮತ್ತು ನನ್ನ ತಂದೆ ನಂಜುಂಡಪ್ಪ ಎಂದರೆ ಸರಿ. ಸಾಕ್ಷಿಗೆ ಒಂದು ದೃಢೀಕೃತ ಕ್ರಯಪತ್ರದ ದಾಖಲೆಯನ್ನು ತೋರಿಸಿ ಈ ಪತ್ರದಲ್ಲಿ ಬರೆದಿರುವ ಸರ್ವೆ ನಂ.119 ರಲ್ಲಿ 4 ಎಕರೆ 12 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದು ನಮೂದು ಮಾಡಿದೆ ಎಂದರೆ ಸಾಕ್ಷಿಯುನಮೂದು ಮಾಡಿರುವುದು ನಿಜ ಆದರೆ ಅದು ಸುಳ್ಳು ಮಾಹಿತಿ ಎಂದು ನುಡಿಯುತ್ತಾರೆ.

ನನ್ನ ಅಜ್ಜಿ, ದೊಡ್ಡಪ್ಪ ಮತ್ತು ನನ್ನ ಅಪ್ಪ ಸೇರಿ ಸರ್ವೆ ನಂ.119 ರ ಪೂರ್ತಿ ದಾವಾ ಆಸ್ತಿಯನ್ನು ಮಾರಾಟ ಮಾಡಿರುವುದರಿಂದ ನಮಗೆ ಯಾವುದೇ ಜಮೀನು ಉಳಿದಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾವು ಯಾವತ್ತಿಗೂ ಸಹಃ ಅನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜಿ, ದೊಡ್ಡಪ್ಪ ಮತ್ತು ನನ್ನ ಅಪ್ಪ ಸೇರಿ ದಾವಾ ಆಸಿತಯನ್ನು ಮಾರಾಟ ಮಾಡಿದ್ದು ಅದನ್ನು ಖರೀದಿ ಮಾಡಿಕೊಂಡವರು ಖಾತೆ ಬದಲಾವಣೆ ಮಾಡಿಕೊಳ್ಳದೇ ಇದ್ದ ಕಾರಣ ನಾವು ಈ ಸುಳ್ಳು ದಾವೆಯನ್ನು ಹಾಕಿರುತ್ತೇವೆ ಎಂದರೆ ಸರಿಯಲ್ಲ. ನಂತರ ಬಳೆಗಾರ ರುದ್ರಪ್ಪ ರವರ ಮನೆಯಲ್ಲಿ 1964 ರಲ್ಲಿ ನೋಂದಾಯಿತ ವಿಭಾಗ ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಬಿ.ಎಂ.ನಂಜುಂಡಪ್ಪ ಎಂದರೆ ಬಳೆಗಾರ ಮರುಳಪ್ಪ ರವರ ಮಗ ನಂಜುಂಡಪ್ಪ ಎಂದರೆ ನನಗೆ ಗೊತ್ತಿಲ್ಲ. ಸದರಿ ಬಿ.ಎಂ.ನಂಜುಂಡಪ್ಪ ರವರಿಗೆ ಸರ್ವೆ ನಂ.119 ರಲ್ಲಿ 2 ಎಕರೆ ಜಮೀನು ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ 2 ಎಕರೆ ಜಮೀನನ್ನು 1 ನೇ ಪ್ರತಿವಾದಿಯು ಬಿ.ಎಂ.ನಂಜುಂಡಪ್ಪ ರವರಿಂದ ದಿಃ23.11.1981 ರಲ್ಲಿ ಶುದ್ಧ ಕ್ರಯಕ್ಕೆ ಕೊಂಡುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಕ್ರಯಕ್ಕೆ ಕೊಂಡ ದಿನಾಂಕದಿಂದ 1 ನೇ ಪ್ರತಿವಾದಿಯು ಸದರಿ 2 ಎಕರೆ ಜಮೀನಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಖರೀದಿ ಮಾಡಿದವರು ಖಾತೆ ಬದಲಾವಣೆ ಮಾಡಿಕೊಳ್ಳದ ಕಾರಣ ಅದನ್ನು ನಾವು ಪೌತಿ ಆಧಾರದ ಮೇಲೆ ನಮ್ಮ ಹೆಸರಿಗೆ ಮಾಡಿಸಿಕೊಂಡು ಈ ಸುಳ್ಳು ದಾವೆ ಹಾಕಿರುತ್ತೇವೆ ಎಂದರೆ ಸರಿಯಲ್ಲ.

ಸರ್ವೆ ನಂಬರ್ 114 ರಲ್ಲಿರುವ ಆಸ್ತಿಯನ್ನು ನನ್ನ ಅಜ್ಜಿ, ದೊಡ್ಡಪ್ಪ ಮತ್ತು ನನ್ನ ತಂದೆ ದಿಃ11.02.1942 ರಲ್ಲಿ ಗೋವಿಂದಪುರದ ತಿಮ್ಮಯ್ಯ ರವರ ಮಕ್ಕಳು ಹನುಮಂತಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಸರ್ವೆ ನಂ.119 ಮತ್ತು 114 ರ ಎರಡೂ ಜಮೀನುಗಳು ಅಕ್ಕ-ಪಕ್ಕದಲ್ಲಿ ಇವೆ ಎಂದರೆ ಸರಿ. ಸದರಿ ಆಸ್ತಿಗಳನ್ನು ಮಾರಾಟ ಮಾಡಿರುವುದರಿಂದ ಎರಡೂ ಸರ್ವೆ ನಬರಿನಲ್ಲಿ ನಮಗೆ ಯಾವುದೇ ಜಮೀನು ಉಳಿದುಕೊಂಡಿಲ್ಲ ಎಂದರೆ ಸರಿಯಲ್ಲ. ಕ್ರಯ

ಪತ್ರದ ಮೂಲಕ ಕ್ರಯಕ್ಕೆ ಖರೀದಿ ಮಾಡಿವರ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇಲ್ಲದಿದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ನೀಡಲು ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಅನುಮತಿ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.